ದಿನಾಂಕಃ 26.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಬಿ.ಜಿ. ವಕೀಲರಿಂದ:**

ವಾದಿಯ ಪರಿಚಯ ನನಗಿಲ್ಲ. ನಾನು ಈ ಹಿಂದೆ ಕೆಇಬಿ ರವರ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೆ. ಆ ದಾವೆಯನ್ನು 2002 ರಲ್ಲಿ ಸಲ್ಲಿಸಿರಬಹುದು. ಜಿ.ಎಂ.ಸುಬ್ಬರಾಯಚಾರ್ ನನ್ನ ಗಂಡ. ನಾನು ಸದರಿರವರ ಎರಡನೇ ಪತ್ನಿ. ನನ್ನ ಗಂಡನ ಮೊದಲನೇ ಪತ್ನಿಯ ಹೆಸರು ರತ್ನ. ರತ್ನ ರವರಿಗೆ ಇಬ್ಬರು ಮಕ್ಕಳಿದ್ದು, ಅವರಿಬ್ಬರು ಈಗ ಜೀವಂತವಿಲ್ಲ. ಕರೆಂಟ್ ಶಾರ್ಟ್ ಸರ್ಕ್ಯೂಟ್ ನಿಂದ ನನ್ನ ಅತ್ತೆ ಸಿದ್ದಮ್ಮ, ರತ್ನ ಮತ್ತು ಅವರ ಮಕ್ಕಳಾದ ಅಭಿಷೇಕ್ ಮತ್ತು ಅಭಿಲಾಷ್ ಮೃತಪಟ್ಟಿದ್ದಾರೆ. ಆ ಸಮಯಕ್ಕೆ ನಾನು ಸುಬ್ಬರಾಯಚಾರ್ ರವರನ್ನು ಮದುವೆಯಾಗಿರಲಿಲ್ಲ. ದಿ.01.05.2001 ರಲ್ಲಿ ರತ್ನ ಮತ್ತು ಅವರ ಮಕ್ಕಳು ಮರಣ ಹೊಂದಿದ್ದಾರೆ ಎಂದರೆ ಸರಿ. ಸುಬ್ಬರಾಯಚಾರ್ ರವರು ದಿ.21.10.2006 ರಂದು ಮೃತರಾದರು. KPTCL ರವರಿಂದ ಪರಿಹಾರ ಪಡೆದುಕೊಳ್ಳುವ ಉದ್ದೇಶದಿಂದ ನಾನು Succession Certificate ಕೋರಿ P & SC.6/2008 ರಂತೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯನ್ನು ನನ್ನ ಈಗಿನ ವಕೀಲರ ಮೂಲಕ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ವಾದಿಯನ್ನು ಸಹಾ ಎದುರುದಾರರನ್ನಾಗಿ ತೋರಿಸಿದ್ದೆ ಎಂದರೆ ಸರಿಯಲ್ಲ.

P & SC ಅರ್ಜಿಯನ್ನು ನಾನು ಮತ್ತು ನನ್ನ ಇಬ್ಬರು ಮಕ್ಕಳಾದ ದನುಷ್ ಮತ್ತು ದೀಕ್ಷಿತ್ ರವರು ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಅರ್ಜಿಯಲ್ಲಿ ಈ ದಾವೆಯ ವಾದಿಯನ್ನು ಸಹಾ ಎದುರುದಾರರನ್ನಾಗಿ ತೋರೀಸಿದ್ದು ಅವರು ಶಾಂತಿಪ್ರಸಾದ್ ಎನ್ನುವ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರು ಎಂದರೆ ಸರಿಯಲ್ಲ. KPTCL ರವರಿಂದ ರೂ.32 ಲಕ್ಷ ಹಣವನ್ನು ಪರಿಹಾರವಾಗಿ ಕೊಡಿಸುವಂತೆ ಅ.ದಾ.ಸಂ.206/2002 ರಂತೆ ದಾವೆಯನ್ನು ನನ್ನ ಗಂಡ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ನನ್ನ ಗಂಡ ಮತ್ತು ಈ ದಾವೆಯ ವಾದಿ ಇಬ್ಬರು ಸೇರಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ರೂ.14,50,000/- ಹಣ ಪರಿಹಾರ ನೀಡುವಂತೆ ಆದೇಶವಾಗಿದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ KPTCL ನವರು RSA.1021/2008 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ತಾಯಿ, ಅವರ ಮೊದಲನೇ ಪತ್ನಿ ಮತ್ತು ಮಕ್ಕಳು ನನ್ನ ವಿವಾಹ ಪೂರ್ವದಲ್ಲಿ ಮೃತರಾಗಿದ್ದರು ಎಂದರೆ ಸರಿ. ಮೇಲ್ಮನವಿಯಲ್ಲಿ ರೂ.6,00,000/- ಹಣವನ್ನು ನ್ಯಾಯಾಲಯದಲ್ಲಿ ಜಮೆ ಮಾಡಲು ಆದೇಶವಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ನನ್ನ ಗಂಡ ಕ್ಯಾನ್ಸರ್ ಕಾರಣದಿಂದ ಮೃತರಾದರು ಎಂದರೆ ಸರಿ. ವಾದಿಯು ನನ್ನ ಗಂಡನ ಮೊದಲನೇ ಪತ್ನಿಯ ಮಗಳು ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ದೇವಕಿ ರವರು ನನ್ನ ಗಂಡನಿಗೆ ಯಾವ ರೀತಿ ಸಂಬಂಧ ಎಂದು ನನಗೆ ಗೊತ್ತಿಲ್ಲ. KPTCL ನಿಂದ ಬಂದ ಪರಿಹಾರ ಹಣದ ಮೇಲೆ ನಮಗೆ ಹಕ್ಕು ಇಲ್ಲದ ಕಾರಣ P & SC ಪ್ರಕರಣ ವಜಾ ಆಗಿದೆ ಎಂದರೆ ಸರಿಯಲ್ಲ. ವಾದಿ ಜೀವಂತವಿರುವಾಗಲೇ ಅವರು ಮೃತರಾಗಿದ್ದಾರೆ ಎಂದು ತಿಳಿಸಿ ದಾವ ಜಮೀನುಗಳ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವ

ಜಮೀನುಗಳ ಖಾತೆ 2016 ರಲ್ಲಿ ನನ್ನ ಹೆಸರಿಗೆ ಆಗಿದೆ. ಗೌಡಹಳ್ಳಿ PACS ನಲ್ಲಿ ದಾವ ಜಮೀನುಗಳ ಮೇಲೆ ಸಾಲ ಪಡೆಯಲು ಪ್ರಯತ್ನಿಸಿದ್ದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ವಾದಿ ನನಗೆ ನೋಟೀಸು ಕಳುಹಿಸಿದ್ದರು ಎಂದರೆ ಸರಿಯಲ್ಲ. ಅದೇರೀತಿ ದಾವ ಜಮೀನುಗಳ ಆಧಾರದ ಮೇಲೆ ನನಗೆ ಸಾಲ ಕೊಡಬಾರದು ಎಂದು ವಾದಿಯು PACS ರವರಿಗೆ ನೋಟೀಸು ಕಳುಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ಸುಬ್ಬರಾಯಚಾರ್ ರವರ ಜಮೀನುಗಳ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ಆ ರೀತಿ ಖಾತೆ ಮಾಡಿಸಿಕೊಳ್ಳುವಾಗ ವಾದಿಯ ಇರುವಿಕೆಯನ್ನು ಮರೆಮಾಚಿ ಮೋಸದಿಂದ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವ ಜಮೀನುಗಳಲ್ಲಿ ನಾನೇ ಕೃಷಿ ಮಾಡುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದ ಕೇವಲ ಅರ್ಧ ಎಕರೆ ಜಮೀನಿನಲ್ಲಿ ಮಾತ್ರ ಕೃಷಿ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಪ್ರತಿವಾದಿಗಳು ವಯಸ್ಕರು ಎಂದರೆ ಸರಿ. ದಾವ ಜಮೀನುಗಳನ್ನು ಸಂಪೂರ್ಣವಾಗಿ ನಾನೇ ಕೃಷಿ ಮಾಡಿ ಸಂಪೂರ್ಣ ಉತ್ಪತ್ತಿಯನ್ನು ನಾನೇ ಪಡೆದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಜಮೀನುಗಳಲ್ಲಿ ಪಾಲು ಕೊಡುವಂತೆ ದಿ.18.11.2015 ರಂದು ವಾದಿ ನನಗೆ ನೋಟೀಸು ಕಳುಹಿಸಿದ್ದರು ಎಂದರೆ ಸರಿಯಲ್ಲ. ಆ ನೋಟೀಸನ್ನು ನಾನು ಸ್ವೀಕರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-20 ರಲ್ಲಿ ಇರುವ ಸಹಿ ನನ್ನದೇ ಎಂದರೆ ಸರಿ. ವಾದಿ ಕಳುಹಿಸಿದ ನೋಟೀಸನ್ನು ನಾನು ಸ್ವೀಕರಿಸಿಕೊಂಡಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಜಮೀನುಗಳ ಮೇಲೆ ವಾದಿಗೂ ಸಹಾ ಹಕ್ಕಿದೆ ಎಂದರೆ ಸರಿಯಲ್ಲ.

ದಾವ ಆಸ್ತಿಗಳು ನನ್ನ ಗಂಡನಿಗೆ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ದಾವ ಜಮೀನುಗಳ ಖಾತೆ ದಾಖಲಿಸಿಕೊಳ್ಳುವ ಕಾಲಕ್ಕೆ ಹಾಜರುಪಡಿಸಿದ್ದ ವಂಶವೃಕ್ಷದಲ್ಲೂ ಸಹಾ ಸತ್ಯಸಂಗತಿಗಳನ್ನು ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನಾನು P & SC ಅರ್ಜಿ ಸಲ್ಲಿಸುವ ಕಾಲಕ್ಕೆ ವಾದಿ ಮೈನರ್ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಹೀಗಿದ್ದರೂ ಸಹಾ ವಾದಿ ವಯಸ್ಕರು ಎಂದು ತೋರಿಸಿ ಸದರಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ವಾದಿ ತನ್ನ ತಾಯಿಯ ಮರಣ ನಂತರ ತನ್ನ ಅತ್ತೆ 4 ನೇ ಪ್ರತಿವಾದಿಯ ಮನೆಯಲ್ಲಿ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. KPTCL ರವರಿಂದ ಪಡೆದುಕೊಂಡ ಪರಿಹಾರ ಹಣದಿಂದ ವಾದಿಯು ತನ್ನ ವಿದ್ಯಾಭ್ಯಾಸ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ ಇಬ್ಬರು ಪತ್ನಿಯರು ಇಲ್ಲ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬರೆಸಿಲ್ಲ. P & SC ಪ್ರಕರಣದಲ್ಲಿನ ಆದೇಶದಂತೆ ದಾವೆಯನ್ನು ಸಲ್ಲಿಸಿದ್ದೇನೆ. ಆ ರೀತಿ ಬೆಂಗಳೂರಿನಲ್ಲಿ ದಾವೆ ದಾಖಲಿಸಿದ್ದೇನೆ. ಸದರಿ ಪ್ರಕರಣದ ಸಂಬಂಧ ಮೇಲ್ಮನವಿಯಲ್ಲಿ ಆದೇಶವಾದ ನಂತರ ಪರಿಹಾರ ಹಣಕ್ಕಾಗಿ ದಾವೆಯನ್ನು ಸಲ್ಲಿಸಿದ್ದೇನೆ. ಸದರಿ ದಾವೆಯ ಸಂಖ್ಯೆಯನ್ನು ನನ್ನಿಂದ ಹೇಳಲು ಆಗುವುದಿಲ್ಲ.

RSA ಪ್ರಕರಣದಲ್ಲಿ ಸಂಪೂರ್ಣ ಹಣವನ್ನು ವಾದಿಯೇ ಪಡೆದುಕೊಳ್ಳಬೇಕು ಎಂದು ಆದೇಶವಾಗಿದೆ ಎಂದರೆ ಸರಿಯಲ್ಲ. ವಾದಿಯು ಪರಿಹಾರ ಹಣ ಮತ್ತು ದಾವ ಜಮೀನಿನಲ್ಲಿ ಹಕ್ಕು ಪಡೆಯಬಾರದು ಎಂದು ಉದ್ದೇಶ ಪೂರ್ವಕವಾಗಿ ಪ್ರಕರಣಗಳನ್ನು ದಾಖಲಿಸಿ ಹಂತ ಹಂತವಾಗಿ

ಮುಂದೂಡಿಸಿಕೊಂಡು ಹೋಗುತ್ತಿದ್ದೆ ಎಂದರೆ ಸರಿಯಲ್ಲ. ದಾವ ಜಮೀನಿನ ಉತ್ಪತ್ತಿಯ ಬಗ್ಗೆ ಲೆಕ್ಕ ಇಟ್ಟಿಲ್ಲ. ದಾವ ಜಮೀನಿನಲ್ಲಿ ಇರುವ ಕಾಫೀ ಗಿಡಗಳು ಈಗ ಹಾಳಾಗಿವೆ. ದಾವ ಜಮೀನುಗಳ ಪಹಣಿಯಲ್ಲಿ ಇರುವ ಬೆಳೆ ಕಾಲಂ ಗಳನ್ನು ನಾನು ನೋಡಿಲ್ಲ. ದಾವ ಜಮೀನುಗಳ ಪಹಣಿಯ ಬೆಳೆ ಕಾಲಂ ನಲ್ಲಿ ರೋಬೋಸ್ಟಾ ಕಾಫೀ ಮತ್ತು ಮೆಣಸು ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಪಹಣಿಯಲ್ಲಿನ ಬೆಳೆ ಕಾಲಂ ಸಮೀಕ್ಷೆಯ ಮೂಲಕ ನಮೂದಿಸಲಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವ ಜಮೀನುಗಳಲ್ಲಿ ಕಾಫೀ ಬೆಳೆ ಬೆಳೆದಿದ್ದರು ಸಹಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತರಿ ಜಮೀನುಗಳಲ್ಲಿ ಭತ್ತ ಮತ್ತು ಅಡಿಕೆ ಬೆಳೆಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವ ಜಮೀನಿನ ಉತ್ಪತ್ತಿಯಲ್ಲಿ ಪಾಲು ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ದಾಖಲೆಗಳನ್ನು ಸೃಷಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವ ಜಮೀನಿನ ಮೇಲೆ ವಾದಿಗೆ ಹಕ್ಕು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವಕ್ಕೂ KPTCL ರವರಿಂದ ಬಂದ ಪರಿಹಾರ ಹಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮದುವೆ ಪೂರ್ವದಲ್ಲೇ ನನ್ನ ಗಂಡನ ಮೊದಲನೇ ಹೆಂಡತಿ ಮತ್ತು ಮಕ್ಕಳು ತೀರಿಕೊಂಡಿರುವ ಕಾರಣ ನನಗೆ ಎದುರು ಹಕ್ಕು ಕೇಳುವ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನನ್ನ ಎದುರು ಹಕ್ಕಿನ ಸಂಬಂಧ ನ್ಯಾಯಾಲಯದ ಶುಲ್ಕ ಪಾವತಿಸಿಲ್ಲ. ಪರಿಹಾರ ಹಣವನ್ನು ವಾದಿಯೇ ಸಂಪೂರ್ಣವಾಗಿ ಪಡೆದಿದ್ದಾರೆ ಎಂದರೆ ಸರಿ. ಪರಿಹಾರ ಹಣದ ಮೇಲೆ ನನಗೆ ಯಾವುದೇ ಹಕ್ಕು ಬಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಈ ಹಂತದಲ್ಲಿ 4 ನೇ ಪ್ರತಿವಾದಿ ಪರ ವಕೀಲರು ತಮ್ಮ ಕೌಂಟರ್ ಕ್ಲೈಮ್ ಸಂಬಂಧ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪಾಟೀ ಸವಾಲಿಗೆ ಅನುಮತಿಸುತ್ತಾ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾಧಿಂ.,
ಮೂಡಿಗೆರೆ.